(ಗ) ವಿಷಯ :— ತುಮಕೂರು ಜಿಲ್ಲೆಯ ಹೇಮಾವತಿ ನಾಲಾ ವಲಯದ ಕಾಮಗಾರಿಗಳು ಸಂಪೂರ್ಣವಾಗಿ ಸ್ಥಗಿತಗೊಂಡಿರುವುದು.

+ ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) :— ಮಾನ್ಯ ಅಧ್ಯಕ್ಷರೆ, ತುಮಕೂರು ಜಿಲ್ಲೆಯ ಹೇಮಾವತಿ ನಾಲಾ ವಲಯದ ಕಾಮಗಾರಿಗಳು ಸಂಪೂರ್ಣವಾಗಿ ಸ್ಥಗಿತಗೊಂಡಿರುವ ಬಗ್ಗೆ ಮಾನ್ಯ ಭಾರಿ ನೀರಾವರಿ ಸಚಿವರ ಗಮನಕ್ಕೆ ಈ ವಿಚಾರವನ್ನು ತರಬಯಸುತ್ತೇನೆ. ಮಾನ್ಯ ಸಚಿವರು ನಾಲ್ಕು ತಿಂಗಳುಗಳ ಹಿಂದೆ ಅಲ್ಲಿನ 125 ನೇ ಕಿ.ಮೀ. ನಿಂದ 187 ನೇ ಕಿ.ಮೀ. ವರೆಗಿನ ಕಾಮಗಾರಿಗಳ ಕೆಲಸಗಳನ್ನು ಪರಿಶೀಲನೆ ಮಾಡುವ ಸಲುವಾಗಿ ಅಲ್ಲಿಗೆ ಬಂದಿದ್ದಾಗ ನನ್ನನ್ನು ಕೂಡ ಕರೆದುಕೊಂಡು ಹೋಗಿದ್ದರು. ಎರಡು ಬಾರಿ ಪರಿಶೀಲನೆ ಮಾಡಿದ್ದಾರೆ. ಅದು ಅಂದು ಯಾವ ಹಂತದಲ್ಲಿ ಇತ್ತೋ ಅದೇ ಹಂತದಲ್ಲಿಯೇ ಇಂದಿಗೂ ಇದೆ. ಸ್ವಲ್ಪವೂ ಕೂಡ ಬದಲಾವಣೆಯಾಗಿಲ್ಲ. 1998ನೇ ಡಿಸೆಂಬರ್‌ನಲ್ಲಿ ಹಾಗೂ 1999ನೇ ಮಾರ್ಚ್ ತಿಂಗಳಿನಲ್ಲಿ ಪರಿಶೀಲನೆ ಮಾಡಿದ ಮೇಲೂ ಕೂಡ 2000 ಇಸವಿ ಬರುತ್ತಿದ್ದರೂ ಕೂಡ ಇನ್ನೂ ಕುಣಿಗಲ್ ಕೆರೆಗೆ ನೀರು ಬರುವ ಸೂಚನೆಗಳು ಕಂಡುಬರುತ್ತಿಲ್ಲ. ಕಾಮಗಾರಿಗಳ ಪ್ರಗತಿ ಕಾರ್ಯಗಳು ಜಾರಿಯಲ್ಲಿ ಇಲ್ಲ. ತಮಗೂ ಕೂಡ ಇದರ ಬಗ್ಗೆ ಆಸಕ್ತಿ ಇಲ್ಲ ಎನ್ನುವುದಕ್ಕೆ ತಾವು ಬಜೆಟ್‌ನಲ್ಲಿ ಒದಗಿಸಿರುವ ಕೇವಲ 45 ಕೋಟಿ ರೂ.ಗಳ ಮೊತ್ತವನ್ನು ಗಮನಿಸಿದರೆ ಎಲ್ಲರಿಗೂ ಇದು ಗೊತ್ತಾಗುತ್ತದೆ. ಈ 45 ಕೋಟಿ ರೂ.ಗಳಲ್ಲಿ 35 ಕೋಟಿ ರೂ.ಗಳು ಈಗಾಗಲೇ ಪೆಂಡಿಂಗ್ ಬಿಲ್ ಗಳೇನಿವೆ ಅದಕ್ಕೆ ಹೋಗುತ್ತದೆ. ಇನ್ನುಳಿದ 10 ಕೋಟಿ ರೂ.ಗಳು ಸಂಬಳ ಮತ್ತು ವಾಹನ ಖರೀದಿಗಳಿಗೆ ಹೋಗುತ್ತದೆ. ಹೀಗಾದರೆ ಹೇಗೆ? ಸನ್ಮಾನ್ಯ ನಾಗೇಗೌಡರು ಸಚಿವರಾಗಿದ್ದಾಗಲೇ 187ನೇ ಕಿ.ಮೀ. ವರೆಗೂ ಕಾಮಗಾರಿಗಳು ಪೂರ್ಣಗೊಂಡು ಕುಣಿಗಲ್ ಕೆರೆಗೆ ನೀರು ಬರುತ್ತದೆ ಎನ್ನುವ ಆಸೆಯನ್ನು ನಾನು ಇಟ್ಟುಕೊಂಡಿದ್ದೆ. ಆದರೆ ಇಂದು ನನಗೆ ಭ್ರಮನಿರಸನವಾಗಿ ನಿರಾಸೆಯಾಗುತ್ತಿದೆ. ಏಕೆಂದರೆ 2000 ಇಸವಿ ಬರುತ್ತಿದ್ದರೂ ಕೂಡ ಇನ್ನೂ ಅಲ್ಲಿ ಕಾಮಗಾರಿ ಪೂರ್ಣಗೊಂಡಿಲ್ಲ. ಈ ವಿಳಂಬಕ್ಕೆ ಎರಡು ಕಾರಣಗಳು ಮೇಲ್ನೋಟಕ್ಕೆ ಕಂಡುಬರುತ್ತಿದೆ. ಅನಾರೋಗ್ಯಕರ ಕಾಂಪಿಟೇಷನ್‌ನಿಂದಾಗಿ ಎಸ್ಸಾರ್ ರೇಟ್‌ಗಿಂತ ಶೇಕಡ 30 ರಿಂದ ಶೇಕಡ 40 ರವರೆಗೆ ಕೆಳಗೆ ಟೆಂಡರ್ ರೇಟ್ ಆಗುತ್ತಿರುವುದರಿಂದ ಯಾವ ಕಂಟ್ರ್ಯಾಕ್ಟರ್‌ಗಳೂ ಕೂಡ ಮುಂದೆ ಬಂದು ಅಲ್ಲಿ ಕೆಲಸ ಮಾಡುವುದಕ್ಕೆ ತಯಾರಾಗಿಲ್ಲ. ಇನ್ನು ಎರಡನೆಯಾಗಿ ಅಲ್ಲಿ ಕಾಮಗಾರಿ ಕೆಲಸಕ್ಕೆ ಸಫಿಷಿಯೆಂಟ್ ಆಗಿ ಹಣವನ್ನೂ ಕೂಡ ಕೊಡುತ್ತಿಲ್ಲ. ತುಮಕೂರಿಗೆ ಮಾನ್ಯ ಸಚಿವರು ಬಂದಿದ್ದಾಗ ಹೆಚ್ಚಿನ ಹಣವನ್ನು ಒದಗಿಸುವುದಾಗಿ ಹೇಳಿದ್ದರು. ಆದುದರಿಂದ ನಾನು ಕೇಳುವುದೇನೆಂದರೆ, ಶ್ರೀ ನಾಗೇಗೌಡರು ತಮ್ಮ ಅಧಿಕಾರಾವಧಿಯಲ್ಲಿಯೇ 187ನೇ ಕಿ.ಮೀ. ವರೆಗಿನ ಕಾಮಗಾರಿಯನ್ನು ಮುಗಿಸಿ ಕುಣಿಗಲ್ ಕೆರೆಗೆ ನೀರನ್ನು ಕೊಡಿಸುವ ಆಲೋಚನೆಯನ್ನೇನಾದರೂ ಹೊಂದಿದ್ದಾರೆಯೇ ಎಂಬ ಬಗ್ಗೆ ದಯಮಾಡಿ ಮಾನ್ಯ ಸಚಿವರು ಉತ್ತರ ಕೊಡಬೇಕು.

ಶ್ರೀ ಕೆ.ಎನ್. ನಾಗೇಗೌಡ (ಮಾನ್ಯ ಭಾರಿ ನೀರಾವರಿ ಸಚಿವರು) :— ಮಾನ್ಯ ಅಧ್ಯಕ್ಷರೆ, 124ನೇ ಕಿ.ಮೀ. ವರೆಗೆ ಸಿ.ಡಿ. ವರ್ಕ್ಸ್ ಮತ್ತಿನ್ನಿತರ ಕೆಲಸಗಳನ್ನು ಮುಗಿಸಬೇಕೆಂದು ಈಗಾಗಲೇ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಈ ಫೈನಾನಷಿಯಲ್ ಇಯರ್ ಒಳಗೆ 124ನೇ ಕಿ.ಮೀ.ವರೆಗೆ ಕಾಮಗಾರಿಯನ್ನು ಮಾಡಿ ಪೊಟೆನ್ಷಿಯಲ್ ಕ್ರಿಯೇಟ್ ಮಾಡಬೇಕು ಎಂಬುದಕ್ಕೆ ನಾವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಇದು ನಿಮಗೂ ಗೊತ್ತಿದೆ. ಇದಕ್ಕೆ ಸಂಬಂಧಪಟ್ಟಂತೆ ಡಿಸ್ಟ್ರಿಬ್ಯೂಷನ್ ಮತ್ತು ಸಿ.ಡಿ. ವರ್ಕ್ಸ್‌ಗಳು ವೇರಿಯಸ್ ಸ್ಟೇಜ್‌ಗಳಲ್ಲಿದೆ. 125ನೇ ಕಿ.ಮೀ. ನಿಂದ 150 ನೇ ಕಿ.ಮೀ. ವರೆಗೆ ವರ್ಕ್ಸ್‌ಗಳು ವೇರಿಯಸ್ ಸ್ಟೇಜ್‌ಗಳಲ್ಲಿದೆ. ಇದನ್ನು ನೀವು ಮತ್ತು ನಾವುಗಳು ನೋಡಿದ್ದೇವೆ. ತಾವು ಈಗ 151 ರಿಂದ 187ನೇ ಕಿ.ಮೀ. ವರೆಗಿನ ಕಾಮಗಾರಿಗಳ ಬಗ್ಗೆ ಕೇಳುತ್ತಿದ್ದೀರಿ. ಇದರ ಬಗ್ಗೆ ಈಗಾಗಲೇ ಸರ್ವೆ ಮಾಡಿ ಅಲೈನ್‌ಮೆಂಟ್ ವರ್ಕ್ ಕೂಡ ಕಂಪ್ಲೀಟ್ ಆಗಿದ್ದು ಎಸ್ಟಿಮೇಟ್ ವೇರಿಯಸ್ ಸ್ಟೇಜ್‌ನಲ್ಲಿ, ಕಂಪ್ಲೀಟ್ ಆಗುತ್ತಾ ಇದೆ. ಆದುದರಿಂದ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಕೆಲಸವನ್ನು ಪ್ರಾರಂಭ ಮಾಡುತ್ತೇವೆ. ಇನ್ನು ಇದಕ್ಕೆ ಒದಗಿಸಿರುವುದು ಕೇವಲ 45 ಕೋಟಿ ರೂ.ಗಳು ಎಂದು ಮಾನ್ಯ ಸದಸ್ಯರು ಏನು ಹೇಳಿದರೋ ಅದು ನಿಜ. ಇದನ್ನು ಹಿಂದೆ ನಿನ್ನೆಯ ದಿವಸ ಮಾತನಾಡಿದ್ದೇನೆ. ಇದನ್ನು ಮುಗಿಸುವ ಸಲುವಾಗಿಯೇ ಕಾವೇರಿ ಹಣಕಾಸು ನಿಗಮ ವನ್ನು ಸ್ಥಾಪನೆ ಮಾಡಿ ಸಾಲವನ್ನು ತೆಗೆದುಕೊಳ್ಳಬೇಕೆನ್ನುವ ಯೋಚನೆ ಕೂಡ ಇದೆ. ಈಗೇನು ಕೃಷ್ಣಾ ಜಲಭಾಗ್ಯ ನಿಗಮ ಮತ್ತು ಕರ್ನಾಟಕ ನೀರಾವರಿ ನಿಗಮವೆಂದು ಮಾಡಿದ್ದೇವೆಯೋ ಅದೇ ರೀತಿಯಲ್ಲಿ ಇದನ್ನೂ ಮಾಡಬೇಕೆಂಬ ಯೋಚನೆ ಇದೆ. ಇದರ ಬಗ್ಗೆ ಹಣಕಾಸು ಮಂತ್ರಿಗಳಾಗಿರುವ ಮಾನ್ಯ ಉಪ ಮುಖ್ಯಮಂತ್ರಿಗಳು ಈ ತಿಂಗಳ 8ನೇ ತಾರೀಖು ಅಥವಾ 9ನೇ ತಾರೀಖು ಸದನದಲ್ಲಿ ಉತ್ತರವನ್ನು ಕೊಡುವ ಸಂದರ್ಭದಲ್ಲಿ ಹೇಳುತ್ತಾರೆ. ಈ ಮೂರನೇ ನಿಗಮವನ್ನು ಮಾಡಿ ಕರ್ನಾಟಕದಲ್ಲಿ ಕಾವೇರಿ ಬೇಸಿನ್‌ನಲ್ಲಿ ನಡೆಯುತ್ತಿರುವ ಆನ್ ಗೋಯಿಂಗ್ ಪ್ರಾಜೆಕ್ಟ್‌ಗಳಿಗೆ ಸಾಲವನ್ನು ಒದಗಿಸಿ ಕೆಲಸವನ್ನು ಮುಗಿಸಬೇಕು ಎನ್ನುವ ಸಲುವಾಗಿಯೇ ಯೋಚನೆಯನ್ನು ಮಾಡಲಾಗಿದೆ. ಅಧಿಕೃತವಾಗಿ 9ನೇ ತಾರೀಖು ಮಾನ್ಯ ಉಪಮುಖ್ಯಮಂತ್ರಿಗಳು ಸದನದಲ್ಲಿ ಇದರ ಬಗ್ಗೆ ಅನೌನ್ಸ್ ಮಾಡುತ್ತಾರೆ, ಇದರಿಂದ ಕಾಮಗಾರಿ ಮುಗಿಸಿ ಕೆಣಗಲ್‌ಗೆ ಆದಷ್ಟು ಬೇಗ ನೀರನ್ನು ಕೊಡುತ್ತೇವೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :— ಕೆಣಗಲ್ ಕೆರೆಗೆ ನೀರನ್ನು ಯಾವಾಗ ಕೊಡುತ್ತೀರಿ ಎಂಬ ಬಗ್ಗೆ ದಯಮಾಡಿ ಒಂದು ಮಾತನ್ನು ಹೇಳಿಬಿಡಿ.

ಶ್ರೀ ಕೆ.ಎನ್. ನಾಗೇಗೌಡ (ಮಾನ್ಯ ಭಾರಿ ನೀರಾವರಿ ಸಚಿವರು) :— 187ನೇ ಕಿ.ಮೀ. ವರೆಗೆ ಸರ್ವೆ ಕೆಲಸ, ಅಲೈನ್‌ಮೆಂಟ್ ವರ್ಕ್ ಹಾಗೂ ಎಸ್ಟಿಮೇಟ್ ವರ್ಕ್‌ಗಳೆಲ್ಲಾ ಆಗಿದೆ. 151ನೇ ಕಿ.ಮೀ. ವರೆಗೆ ಪೂರ್ಣ ಕೆಲಸವನ್ನು ಮುಗಿಸುತ್ತಿದ್ದೇವೆ. ಇದನ್ನು ಅವರು ಕೂಡ ನೋಡಿದ್ದಾರೆ. 151 ರಿಂದ 187ನೇ ಕಿ.ಮೀ. ವರೆಗಿನ ಕಾಮಗಾರಿ ಕೆಲಸವನ್ನು

ಶೀಘ್ರವಾಗಿ ಮಾಡಿ ಮತ್ತು ವೇಗವಾಗಿ ಮಾಡಿ ಎಂದು ಹೇಳಿದ್ದಾರೆ. ಇದಕ್ಕೆ ಹಣದ ಕೊರತೆ ಇರುವುದು ನಿಜ. ಆ ಕಾರಣಕ್ಕಾಗಿಯೇ ಕಾವೇರಿ ಹಣಕಾಸು ನಿಗಮವನ್ನು ಮಾಡುವ ಸಲುವಾಗಿ ಮಾನ್ಯ ಉಪಮುಖ್ಯಮಂತ್ರಿಗಳು ಸದನದಲ್ಲಿ ಹೇಳುತ್ತಾರೆ. ಆ ನಿಗಮವನ್ನು ಮಾಡಿ ಹಣವನ್ನು ಎತ್ತಿ 2000ನೇ ಇಸವಿಯೊಳಗೆ ನೀರನ್ನು ಕುಣಿಗಲ್ ಕೆರೆಗೆ ಬರುವಂತೆ ಮಾಡಲಾಗುವುದು.

(ಈ) ಕಪ್ಪು ಮತ್ತು ಬೂದು ಪ್ರದೇಶವೆಂದು ಘೋಷಣೆ ಮಾಡಿರುವುದನ್ನು ತೆಗೆದುಹಾಕುವ ಬಗ್ಗೆ.

ಶ್ರೀ ಎಸ್.ಎಂ. ನಬಿ (ಕೊಡ್ಲಿಗಿ) :— ಮಾನ್ಯ ಅಧ್ಯಕ್ಷರೆ, ಕೆಲವಾರು ಪ್ರದೇಶಗಳನ್ನು ಕಪ್ಪು ಹಾಗೂ ಬೂದು ಪ್ರದೇಶಗಳೆಂದು ಘೋಷಣೆ ಮಾಡಿರುವ ಬಗ್ಗೆ ಹಿಂದಿನ ಅಧಿವೇಶನದಲ್ಲಿ ಚರ್ಚೆಯಾಗಿದೆ. ಆದರೆ ಈ ಪ್ರದೇಶಗಳ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮಗಳನ್ನು ತೆಗೆದುಕೊಂಡಿರುವ ಬಗ್ಗೆ ಇದುವರೆಗೆ ತಿಳಿಯಪಡಿಸಿಲ್ಲ. ಯಾವ ಪ್ರದೇಶಗಳನ್ನು ಕಪ್ಪು ಹಾಗೂ ಬೂದು ಪ್ರದೇಶವೆಂದು ಡಿಕ್ಲೇರ್ ಮಾಡಲಾಗಿದೆಯೋ ಅಲ್ಲಿನ ರೈತರು ಪಂಪ್‌ಸೆಟ್ ಹಾಕಿಕೊಂಡರೆ ಸಹ ವಿದ್ಯುತ್ ಸಂಪರ್ಕವನ್ನು ಕೊಡುತ್ತಿಲ್ಲ. ಪಂಪ್‌ಸೆಟ್ ಕೊಳ್ಳಲೂ ಕೂಡ ಬ್ಯಾಂಕ್‌ಗಳಿಂದ ಸಾಲವನ್ನು ಪಡೆಯುವುದಕ್ಕೆ ಆಗುತ್ತಿಲ್ಲ. 1997ರಲ್ಲಿ ಕಪ್ಪು ಮತ್ತು ಬೂದು ಪ್ರದೇಶಗಳೆಂದು ಡಿಕ್ಲೇರ್ ಮಾಡಿರುವುದು ಇದೆ. ನಾವು ಆಗಲೇ ಇದರ ಬಗ್ಗೆ ಮಾತನಾಡಿ ಒತ್ತಾಯ ಮಾಡಿ ಕೇಂದ್ರ ಸರ್ಕಾರದ ಮೇಲೆ ರಾಜ್ಯ ಸರ್ಕಾರ ಒತ್ತಡ ತಂದು ಈ ಘೋಷಣೆಯನ್ನು ತೆಗೆದುಹಾಕಿಸಬೇಕೆಂದು ಹೇಳಿದ್ದೆವು. ಆದರೆ ಈವರೆಗೂ ಕೂಡ ಆ ಕೆಲಸವಾಗಿಲ್ಲ. ಇದರಿಂದಾಗಿ ನನ್ನ ಮತ ಕ್ಷೇತ್ರದಲ್ಲಿ ಬರುವ ಹಗರಿಬೊಮ್ಮನಹಳ್ಳಿಯ ರೈತರಿಗೆ ಬಹಳ ತೊಂದರೆಯಾಗಿದೆ. ಆದುದರಿಂದ ತಮ್ಮ ಮೂಲಕ ಸರ್ಕಾರಕ್ಕೆ ನಾನು ಒತ್ತಾಯ ಮಾಡುವುದೇನೆಂದರೆ ಆದಷ್ಟು ಬೇಗ ಈ ವಿಚಾರದಲ್ಲಿ ಕೇಂದ್ರ ಸರ್ಕಾರಕ್ಕೆ ಒತ್ತಡ ತಂದು ಈ ಘೋಷಣೆಯನ್ನು ತೆಗೆದುಹಾಕಿಸಬೇಕು.

ಶ್ರೀ ತಿಪ್ಪೇಸ್ವಾಮಿ (ಮಾನ್ಯ ಸಣ್ಣ ನೀರಾವರಿ ಸಚಿವರು) :— ಸನ್ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದ ಒಟ್ಟು 43 ತಾಲ್ಲೂಕುಗಳನ್ನು ಕಪ್ಪು ಮತ್ತು ಬೂದು ಪ್ರದೇಶವೆಂದು ಘೋಷಣೆಯನ್ನು ಮಾಡಲಾಗಿದೆ. ಸುಮಾರು ಶೇಕಡ 85 ರಷ್ಟು ಅಂತರ್ಜಲ ಕಡಿಮೆ ಇರುವ ಪ್ರದೇಶಕ್ಕೆ ಕಪ್ಪು ಪ್ರದೇಶವೆಂದು ಡಿಕ್ಲೇರ್ ಮಾಡಲಾಗುತ್ತದೆ. ಇದನ್ನು ನಬಾರ್ಡ್ ಮತಿಯಿಂದ ಸರ್ವೆ ಮಾಡಿಸಲಾಗುತ್ತದೆ. ಈ ರೀತಿ ಡಿಕ್ಲೇರ್ ಮಾಡಿದ ಮೇಲೆ ಕಾನೂನಿನ ಪ್ರಕಾರ ಅಲ್ಲಿ ಪಂಪ್‌ಸೆಟ್ ಹಾಕುವುದಾಗಲಿ, ಬೋರ್‌ವೆಲ್ ತೋಡುವುದಾಗಲಿ ಸಾಧ್ಯವಾಗುವುದಿಲ್ಲ, ಇವು ಬ್ಯಾನ್ ಆಗುತ್ತದೆ. ಇದನ್ನು ಮಾಡಬೇಕಾದರೆ ಮತ್ತೆ ಅಲ್ಲಿ ಅಂತರ್ಜಲವಿದೆಯೆಂದು ವರದಿ ಬಂದರೆ ಮಾತ್ರ ಸಾಧ್ಯವಾಗುತ್ತದೆಯೇ ವಿನಃ ಸರ್ಕಾರ ರಿಕಮೆಂಡ್ ಮಾಡುವುದರಿಂದಾಗಲೀ ಅಥವಾ ಒತ್ತಡ ತರುವುದರಿಂದಾಗಲೀ ಸಾಧ್ಯವಾಗುವುದಿಲ್ಲ. ಆದುದರಿಂದ ನಾನು ಇದರ ಬಗ್ಗೆ ಮತ್ತೆ ಅಲ್ಲಿ ಸರ್ವೆ ಮಾಡಲು ಆದೇಶಿಸುತ್ತೇನೆ. ಅಲ್ಲಿ ಅಂತರ್ಜಲ ಇದೆಯೆಂದು ವರದಿ ಬಂದರೆ ಅಲ್ಲಿಗೆ ಕೊಡಬೇಕಾದ ಸವಲತ್ತನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.